ಮುಕ್ತ
ಸಮಾಜವಾದಿ
ಮಾತುಕತೆ
ಜನವರಿ 2021



# ರೈತರ ಹೋರಾಟ ಕುರಿತು

■ಮಂಗ್ಳೂರ ವಿಜಯ

ಇತ್ತೀಚೆಗೆ ಕೇಂದ್ರ ಸರ್ಕಾರ ಮೂರು ಘಾತುಕ ಕೃಷಿ ಮಸೂದೆಗಳನ್ನು ಪಾಸ್ ಮಾಡಿತು. ಮಸೂದೆಗಳು ಕಾಯ್ದೆಗಳಾದವು. ಈ ನೂತನ ಕೃಷಿ ಕಾಯ್ದೆಗಳು ತಿಳಿಸುವಂತೆ, ಮಾರುಕಟ್ಟೆ ನಿಯಂತ್ರಣ ನಿಯಮಗಳನ್ನು ಸಡಿಲಗೊಳಿಸಿದರೆ, ಕೃಷಿ ಕ್ಷೇತ್ರದಲ್ಲಿ ವಿದೇಶಿ ಕೃಷಿ ಉದ್ದಿಮೆಗಳು ಪ್ರವೇಶಿಸುತ್ತವೆ, ಇದರಿಂದ ಕನಿಷ್ಟ ಬೆಂಬಲ ಬೆಲೆ ಪದ್ಧತಿಗೆ ಪೆಟ್ಟಾಗುತ್ತದೆ. ಸಾರ್ವಜನಿಕ ಸಂಗ್ರಹಣೆ ಪದ್ಧತಿ ಇಲ್ಲವಾಗುತ್ತದೆ ಎನ್ನುವ ರೈತರ ಆತಂಕ ನ್ಯಾಯಯುತವಾಗಿದೆ.

ದೇಶದ ರೈತರ ಮೇಲೆ ಗಂಭೀರ ಪರಿಣಾಮ ಬೀರುವ ಈ ಮಸೂದೆಗಳನ್ನು ಪಾಸ್ ಮಾಡುವ ಮುನ್ನ ದೇಶದ ರೈತ ಸಂಘಟನೆಗಳ ಜೊತೆಗೆ ಮಾತುಕತೆ ನಡೆಸುವುದು ಸೂಕ್ತ ಎಂಬ ವಿವೇಕ ಕೇಂದ್ರ ಸರ್ಕಾರದಲ್ಲಿ ಕಾಣಲಿಲ್ಲ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಸೂದೆಗಳನ್ನು ಪಾಸ್ ಮಾಡುವಾಗ ಸಂಸತ್ತಿನ ಉಭಯ ಸದನಗಳಲ್ಲಿ ಕೂಲಂಕಷ ಚರ್ಚೆಗಾದರೂ ಕೇಂದ್ರ ಸರ್ಕಾರ ಅವಕಾಶ ಒದಗಿಸಿ ಕೊಡಲಿಲ್ಲ. ಸಂಸತ್ ಕಾರ್ಯಕಲಾಪಗಳಿಗೆ ಎಳ್ಳಷ್ಟಾದರೂ ಪ್ರಾಮುಖ್ಯವನ್ನು ನೀಡುವ ಜವಾಬ್ದಾರಿ ಈ ಸರ್ಕಾರಕ್ಕೆ ಇಲ್ಲ ಎಂಬುದು ಮತ್ತೊಮ್ಮೆ ಸಾಬೀತಾಯಿತು.

ಭಾರತೀಯ ಕೃಷಿ ಕ್ಷೇತ್ರದ ಮೇಲೆ, ರೈತಾಪಿ ವರ್ಗದ ಭವಿಷ್ಯದ ಮೇಲೆ ಮತ್ತು ದೇಶದ ಆಹಾರಭದ್ರತೆಯ ಮೇಲೆ ಮಾರಕ ಪರಿಣಾಮ ಬೀರುವಂಥವು ಈ ಮಸೂದೆಗಳು. ಹಾಗಾಗಿ, ದೇಶದ ರೈತರು ಈ ಮಸೂದೆಗಳನ್ನು ಖಂಡತುಂಡವಾಗಿ ವಿರೋಧ ಮಾಡದೇ ಬೇರೆ ದಾರಿ ಇರಲಿಲ್ಲ. ಅವರು ಇವುಗಳ ವಿರುದ್ಧ ಜನಾಭಿಪ್ರಾಯ ಮೂಡಿಸಿದರು. ಕೇಂದ್ರ ಸರ್ಕಾರದ ನಡೆಗೆ ಪ್ರತಿರೋಧ ಒಡ್ಡುವ ಗಂಭೀರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ರೈತರ ಹೋರಾಟ ಈಗ ಒಂದು ತಿಂಗಳನ್ನು ಮುಗಿಸಿದೆ. ಇಡೀ ದೇಶದ ಗಮನವನ್ನು ಸೆಳೆದಿರುವ ಈ ಹೋರಾಟವು ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಈ ಮುಷ್ಕರ ಯಾವುದೋ ಒಂದು ಬೇಡಿಕೆಗೆ ಸಂಬಂಧಿಸಿದ್ದಲ್ಲ. ಅದು ಇಡೀ ಕೃಷಿ ಕ್ಷೇತ್ರವನ್ನು ಒಳಗೊಂಡ ಅನೇಕ ಪ್ರಮುಖ ಹಕ್ಕೊತ್ತಾಯಗಳನ್ನು ಸರ್ಕಾರದ ಮುಂದೆ ಇಟ್ಟಿದೆ. ರೈತರ ಉತ್ಪನ್ನಗಳ ಸಾರ್ವಜನಿಕ ಸಂಗ್ರಹಣೆ ಮತ್ತು ಆಹಾರಧಾನ್ಯಗಳನ್ನು ದೇಶದ ಜನರಿಗೆ ವಿತರಣೆ ಮಾಡುವ ವಿಷಯವನ್ನೂ ರೈತ ಹೋರಾಟ ಎತ್ತಿದೆ. ಆಹಾರ ಧಾನ್ಯ ಉತ್ಪಾದನೆ ಮತ್ತು ವಿತರಣಾ ಜಾಲವನ್ನು ಸುಭದ್ರಗೊಳಿಸತಕ್ಕದ್ದು ಎಂಬ ಮಹೋನ್ನತ ಹಕ್ಕೊತ್ತಾಯವನ್ನು ರೈತ ಹೋರಾಟ ಮಂಡಿಸಿದೆ.

ಪ್ರಪಂಚವನ್ನು ಮುಖ್ಯವಾಗಿ ಶೀತವಲಯ, ಉಷ್ಣ ವಲಯ ಮತ್ತು ಸಮಶೀತೋಷ್ಣ ವಲಯ ಎಂದು ವಿಭಜಿಸಬಹುದು. ಪ್ರಪಂಚದ ಉತ್ತರ ಭಾಗ ಬಹುತೇಕವಾಗಿ ಶೀತವಲಯ ವ್ಯಾಪ್ತಿಗೆ ಬರುತ್ತದೆ. ಇನ್ನು ದಕ್ಷಿಣ ಭಾಗ ಬಹುತೇಕವಾಗಿ ಉಷ್ಣವಲಯ ಮತ್ತು ಸಮಶೀತೋಷ್ಣ ವಲಯ ವ್ಯಾಪ್ತಿಗೆ ಬರುತ್ತದೆ. ಪ್ರತಿಯೊಂದು ವಲಯದಲ್ಲೂ ವಿಶೇಷ ಆಹಾರ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಶೀತವಲಯದಲ್ಲಿ ಏಕ ಬೆಳೆಯನ್ನು ಮತ್ತು ಹೈನು ಉತ್ಪಾದನೆಗಳನ್ನು ಯಥೇಚ್ಛವಾಗಿ ಕಾಣಬಹುದು. ಆದರೆ, ಉಷ್ಣ ವಲಯ ಮತ್ತು ಸಮಶೀತೋಷ್ಣ ವಲಯಗಳು ದೇಶದ ಪ್ರಮುಖ ಆಹಾರ ಬೆಳೆಗಳನ್ನು ಕಾಣುತ್ತೇವೆ.

ಪ್ರಪಂಚದ ಉತ್ತರ ಭಾಗದಲ್ಲಿನ ಅಮೆರಿಕಾ, ಕೆನಡಾ ಮತ್ತು ಯುರೋಪ್‌ನ ಅನೇಕ ದೇಶಗಳಲ್ಲಿ, ಭಾರತವೂ ಸೇರಿದಂತೆ ಅನೇಕ ದಕ್ಷಿಣ ಭಾಗದಲ್ಲಿನ ದೇಶಗಳಲ್ಲಿನ ಆಹಾರಧಾನ್ಯಗಳಿಗೆ ಹೆಚ್ಚು ಬೇಡಿಕೆ ದಶಕಗಳಿಂದಲೂ ಇದೆ. ಇದನ್ನು ಗ್ರಹಿಸಿದ ಉತ್ತರ ಭಾಗದಲ್ಲಿನ ದೇಶಗಳು, ದಕ್ಷಿಣ ಭಾಗದಲ್ಲಿನ ದೇಶಗಳಲ್ಲಿನ ಆಹಾರ ಪದಾರ್ಥಗಳ ಬೆಳವಣಿಗೆ ಪದ್ಧತಿಯ ಮೇಲೆ ಕಣ್ಣು ಹಾಕಿವೆ. ತಮಗೆ ಅವಶ್ಯಕತೆ ಇರುವ ಬೆಳೆಗಳೇ ಇಲ್ಲಿ ಬೆಳೆಯುವುದನ್ನು ಖಾತ್ರಿಪಡಿಸಿಕೊಳ್ಳಲು ಅವು ನಿರಂತರವಾಗಿ ಹುನ್ನಾರ ನಡೆಸಿಕೊಂಡು ಬಂದಿವೆ. ದಕ್ಷಿಣ ಭಾಗದಲ್ಲಿನ ದೇಶಗಳ ಕೃಷಿ ಭೂಮಿಯನ್ನು ಗುತ್ತಿಗೆ ಕೃಷಿ ಪದ್ಧತಿಗೆ ಒಳಪಡಿಸಿ, ತಮಗೆ ಅಗತ್ಯವಾದ ಆಹಾರಧಾನ್ಯ ಬೆಳೆಯುವುದನ್ನು

ಖಾತ್ರಿಪಡಿಸಿಕೊಂಡು, ಅವುಗಳನ್ನು ತಮ್ಮ ದೇಶಗಳಿಗೆ ಆಮದು ಮಾಡಿಕೊಳ್ಳುವ ವರಸೆಗೆ ಉತ್ತರ ಭಾಗದ ದೇಶಗಳು ಹೆಜ್ಜೆ ಇಡುತ್ತಿವೆ.

ನಾವು ನೆನಪು ಮಾಡಿಕೊಳ್ಳಬಹುದು. 1990ರ ದಶಕದಲ್ಲಿ ಫಿಲಿಪೀನ್ಸ್ ಮತ್ತು ಹತ್ತು ವರ್ಷಗಳ ನಂತರ ಆಫ್ರಿಕಾ ಖಂಡದ ಬೋಸ್ವಾನಾ ಮತ್ತಿತರ ದೇಶಗಳು ಈ ರೀತಿಯ ಒತ್ತಡಕ್ಕೆ ಒಳಗಾಗಿದ್ದವು. ಆಗಲೇ ಅಮೆರಿಕಾ ಮತ್ತು ಐರೋಪ್ಯ ರಾಷ್ಟ್ರಗಳು ತಮ್ಮಲ್ಲಿನ ಬೆಳೆಯನ್ನು ಎಥನಾಲ್ ತಯಾರಿಸಲು ಬಳಕೆ ಮಾಡಿಕೊಂಡವು. ಇದರ ಪರಿಣಾಮವಾಗಿ 2007ರ ನಂತರ ಜಾಗತಿಕ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಆಕಾಶ ಮುಟ್ಟಿತು. ಎಷ್ಟೋ ಕಡೆ, ಆಹಾರ ಧಾನ್ಯಕ್ಕಾಗಿ 30ಕ್ಕೂ ಹೆಚ್ಚು ದೇಶಗಳಲ್ಲಿ ಹಾಹಾಕಾರ ಉಂಟಾಯಿತು. ಆಹಾರಕ್ಕಾಗಿ ಜನರು ದಂಗೆ ಎದ್ದರು. ಹಸಿವಿನಿಂದ ಹಾಹಾಕಾರ ಸಂಭವಿಸಿತು.

ಯಾವುದೇ ರಾಷ್ಟ್ರಕ್ಕೆ ಆಹಾರ ಭದ್ರತೆ ಅತ್ಯಂತ ಪ್ರಮುಖವಾದ ವಿಷಯ. ಇನ್ನು, ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಂತೂ ಈ ವಿಷಯದಲ್ಲಿ ಸದಾ ಎಚ್ಚರದಿಂದ ಇರಬೇಕು. ಇಲ್ಲದೇ ಹೋದರೆ, ಆ ದೇಶದ ಸ್ವಾತಂತ್ರ್ಯ ಹರಣವಾಗುವುದು ಖಚಿತ. ಇದನ್ನು ಪ್ರತಿಯೊಂದು ದೇಶ ತನ್ನ ಹತೋಟಿಯಲ್ಲೇ ಇಟ್ಟುಕೊಳ್ಳಬೇಕೇ ಹೊರತು, ಇದರ ಮೇಲೆ ಜಾಗತಿಕ ಮಾರುಕಟ್ಟೆಯು ನಿಯಂತ್ರಣ ಹೊಂದುವುದಕ್ಕೆ ಅವಕಾಶ ನೀಡುವುದು ಭಾರಿ ಅಪಾಯಕಾರಿ.

ಒಂದು ಕಡೆ, ಭಾರತದಂಥ ದೇಶಗಳು ತಮ್ಮ ಆಹಾರ ಭದ್ರತೆಯ ಬಗ್ಗೆ ನಿಗಾ ಇಡುತ್ತಿರುವಾಗಲೆ, ಇನ್ನೊಂದು ಕಡೆ ಬಲಿಷ್ಠ ದೇಶಗಳು ಇನ್ನೊಂದು ದೇಶದ ಆಹಾರ ಭದ್ರತೆ ವಿಷಯದಲ್ಲಿ ತಲೆ ಹಾಕುವ ದುಷ್ಟ ನಡೆಯೂ ಕಂಡು ಬರುತ್ತಲೇ ಇರುತ್ತದೆ. ಸುಮಾರು ಒಂದು ದಶಕದ ಹಿಂದಿನವರೆಗೂ ಭಾರತ ಈ ನಿಟ್ಟಿನಲ್ಲಿ ಜಾಗೃತವಾಗಿ ತನ್ನ ಆಹಾರ ಸಂಗ್ರಹವನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಗಿತ್ತು. ಆದರೆ, ಬಹುಸಂಖ್ಯೆಯಲ್ಲಿರುವ ಬಡವರನ್ನು 'ಬಡತನ ರೇಖೆಯ ಹೊರಗೆ' ಇಟ್ಟ ಪರಿಣಾಮವಾಗಿ, ಆಹಾರ ಧಾನ್ಯಗಳ ಬಳಕೆ ಹೆಚ್ಚಾಗಲಿಲ್ಲ.

2016ರ ನೋಟು ರದ್ದತಿಯಿಂದ ಉಂಟಾದ ನಿರುದ್ಯೋಗ, ನಂತರ ಅನ್ಯಾಯದ ಜಿ.ಎಸ್.ಟಿ. ಕಾಯ್ದೆ ಮತ್ತು 2020ರ ಕೋವಿಡ್ ಪರಿಣಾಮವಾಗಿ, ಆಹಾರ ಧಾನ್ಯಗಳ ಒಟ್ಟಾರೆ ಬೇಡಿಕೆಯ ಪ್ರಮಾಣ ಚಾರಿತ್ರಿಕ ಕುಸಿತ ಕಂಡಿತು.

ಭಾರತದ ರೈತಾಪಿ ವರ್ಗ ನಿರಂತರವಾಗಿ ವ್ಯವಸ್ಥೆಯ ಹುನ್ನಾರಕ್ಕೆ ಬಲಿಯಾಗುತ್ತಾ ಬಂದಿದೆ. ಅವರ ಮೇಲೆ ಅಪ್ರಾಮಾಣಿಕ ವ್ಯಾಪಾರದ ತಂತ್ರಗಾರಿಕೆಗೆ ಸಿಲುಕಿಸಲಾಗಿದೆ. ಜಾಗತಿಕ ಬೆಲೆಗಳಲ್ಲಿ ಏರುಪೇರು ಉಂಟಾಗಿ, ಭಾರತದ ರೈತರು ಸಾಲದ ಹೊರೆಗೆ ಸಿಲುಕಿ ಸಂಕಷ್ಟದಲ್ಲಿ ಬೀಳಬೇಕಾಗಿದೆ. ದೇಶದ ಹಲವು ಮೂಲೆಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡರು. ರೈತಾಪಿ ಮಕ್ಕಳು ಅನಾಥರಾದರು. ಸರ್ಕಾರ ಈ ಕಡೆಗೆ ಕಿಂಚಿತ್ತೂ ಗಮನ ನೀಡಲಿಲ್ಲ.

ಭಾರತವು ತನ್ನದೇ ಆದ ಕೃಷಿನೀತಿಯನ್ನು ಹೊಂದಿರಬೇಕು. ಅಭಿವೃದ್ಧಿ ಹೊಂದಿದ ದೇಶಗಳ ಜೊತೆಗೆ ಈ ವಿಷಯದಲ್ಲಿ ತನ್ನನ್ನು ತುಲನೆ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ.  ಹಾಗೆಯೆ, ಕೃಷಿ ಸಂಬಂಧಿ ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಕೂಡ ಭಾರತ ಸರ್ಕಾರ ಎಚ್ಚರದಿಂದ ಇರುವುದು ಅಪೇಕ್ಷಣೀಯ.

**ಸಮರ್ಪಕ ಬೆಲೆ ನಿಗದಿ**

ರೈತರು ಈಗ ತಾತ್ಕಾಲಿಕ ಪರಿಹಾರಕ್ಕೆ ತೃಪ್ತಿಪಡುತ್ತಿಲ್ಲ. ಇದು ಸಮರ್ಥನೀಯವಾಗಿದೆ. ಆಡಳಿತ ನಡೆಸುತ್ತಿರುವವರಿಗೆ ಪರಿಪೂರ್ಣ ಜ್ಞಾನ ಮತ್ತು ಬದ್ಧತೆ ಇರಬೇಕೇ ಹೊರತು, ಸಂತೆ ಹೊತ್ತಿಗೆ ಮೂರು ಮೊಳ ನೇಯ್ದುಕೊಂಡು ಹೋಗುವ ರೀತಿ ಸರ್ವಥಾ ತಿರಸ್ಕಾರಾರ್ಹ. ದೇಶಕ್ಕಾಗಿ ತಾವು ಬೆಳೆಯುತ್ತಿರುವ ಆಹಾರ ಧಾನ್ಯಗಳಿಗೆ ಸರಿಯಾದ., ತರ್ಕಬದ್ಧವಾದ ಬೆಲೆ ನೀಡುವಂತೆ ರೈತರು ಸರ್ಕಾರದ ಮೇಲೆ ಒತ್ತಡ ಹೇರುತ್ತಿರುವುದಕ್ಕೆ ಇಡೀ ದೇಶದ ಜನತೆಯ ಬೆಂಬಲ ಇದೆ. ರೈತರು ತಮ್ಮ ಬೇಸಾಯದ ವೆಚ್ಚವನ್ನು ಸರಿದೂಗಿಸಿಕೊಂಡು, ನೆಮ್ಮದಿಯು ಬದುಕು ನಡೆಸುವಂತಾದಾಗಲೇ, ಇಡೀ ದೇಶವೂ ಕೂಡ ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತದೆ. ರೈತರ ಎಲ್ಲಾ ಉತ್ಪನ್ನಗಳಿಗೆ ವೈಜ್ಞಾನಿಕವಾದ ಮತ್ತು ನ್ಯಾಯವಾದ ಬೆಂಬಲ ಬೆಲೆ ನೀಡುವ ಪದ್ಧತಿಯನ್ನು ಕಟ್ಟುನಿಟ್ಟಾಗಿ ರೂಪಿಸಿ, ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದೇ ಉತ್ತಮ ಮಾರ್ಗ.

ಕೃಷಿ ಕ್ಷೇತ್ರವು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಪೂರ್ಣವಾಗಿ ಇತ್ಯರ್ಥಗೊಳಿಸುವುದೂ ಮುಖ್ಯ. ಅಂತರ್ಜಲದ ಮಟ್ಟ ಹೆಚ್ಚುವುದಕ್ಕೆ, ಹೊಸ ಕೃಷಿ ತಂತ್ರಜ್ಞಾನದ ಬಳಕೆಯನ್ನು ಜನರ ಬಳಿಗೆ ಕೊಂಡೊಯ್ಯುವುದಕ್ಕೆ, ಸಾವಯವ ಪದ್ಧತಿಯನ್ನು ಜನಪ್ರಿಯಗೊಳಿಸುವುದಕ್ಕೆ ಆದ್ಯ ಗಮನ ನೀಡಬೇಕಾಗುತ್ತದೆ.

ಭಾರತ ಸರ್ಕಾರ ಪಾಸ್ ಮಾಡಿರುವ ಮೂರೂ ಕೃಷಿ ಮಸೂದೆಗಳನ್ನು ತೀವ್ರವಾಗಿ ವಿರೋಧಿಸುತ್ತಿರುವ ಭಾರತದ ರೈತ ಸಂಘಟನೆಗಳ ಹೋರಾಟಕ್ಕೆ ದೇಶದ ಎಲ್ಲಾ ಮೂಲೆಗಳಿಂದ ಬೆಂಬಲ ದೊರಕಿದೆ. ಇದಕ್ಕೆ ಸರ್ಕಾರ ಮಣಿಯಲೇಬೇಕು. ತರಾತುರಿಯಲ್ಲಿ ಕೃಷಿ ಮಸೂದೆಗಳನ್ನು ಪಾಸ್ ಮಾಡಿದ್ದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಛೀಮಾರಿ ಹಾಕಬೇಕಿದೆ.

ದೇಶದ ರೈತರು ವಿದೇಶಿ ಕೃಷಿ ಉದ್ದಿಮೆಗಳೊಡನೆ ಗುತ್ತಿಗೆ ಕೃಷಿಯನ್ನು ನಡೆಸಿದಲ್ಲಿ ಘೋರ ವಂಚನೆಗೆ ಗುರಿಯಾಗುವುದು ನಿಶ್ಚಿತ. ಇದರಿಂದ ಅನೇಕ ದುಷ್ಪರಿಣಾಮಗಳು ಉಂಟಾಗಲಿವೆ. ಅವರು ತಮ್ಮ ಅನುಕೂಲಕ್ಕೆ ತಕ್ಕಂತೆ ಬೆಲೆ ಮತ್ತು ಗುಣಮಟ್ಟದ ಬಗ್ಗೆ ನಿಯಮಗಳನ್ನು ರೂಪಿಸುತ್ತಾರೆ. ರೈತರನ್ನು ವಂಚಿಸುತ್ತಾರೆ. ಖಾಸಗಿ ಕಾರ್ಪೋರೇಟ್ ಉದ್ದಿಮೆಗಳ ಜೊತೆಗೆ ರೈತರು ಯಾವುದೇ ಒಪ್ಪಂದ ಮಾಡಿಕೊಳ್ಳಲು ಇಷ್ಟಪಡುತ್ತಿಲ್ಲ. ಇದು ಸಮರ್ಥನೀಯ.

ದೇಶದಲ್ಲಿ ಇದುವರೆಗೆ ಇದ್ದ ಎಪಿಎಂಸಿ ವ್ಯವಸ್ಥೆಯಲ್ಲಿ ಎಷ್ಟೇ ಅದಕ್ಷತೆ ಇದ್ದರೂ, ಹಣ ಪಾವತಿಯಲ್ಲಿ ವಿಳಂಬ ಉಂಟಾದರೂ ಆ ವ್ಯವಸ್ಥೆಯಲ್ಲೇ ರೈತರು ತಮ್ಮ ಭವಿಷ್ಯವನ್ನು ಕಂಡುಕೊಳ್ಳಲು ನಿರ್ಧರಿಸಿರುವುದು ಬೆಂಬಲರ್ಹವಾಗಿದೆ. ಸರ್ಕಾರಿ ಏಜೆಂಟರಿಗೆ ನಿಗದಿತ ಬೆಂಬಲ ಬೆಲೆಗೆ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ, ಎಪಿಎಂಸಿ ವ್ಯವಸ್ಥೆಯಲ್ಲಿನ ಅರೆಕೊರೆಗಳನ್ನು ನಿರ್ಮೂಲನೆ ಮಾಡುವ ಕಾರ್ಯಕ್ಕೆ ರೈತರು ಮುಂದಾಗಬೇಕಿದೆ.

ರೈತರು ಹೋರಾಡುತ್ತಿರುವುದು ಕೇವಲ ತಮ್ಮ ಹಿತಕ್ಕಾಗಿ ಅಲ್ಲ. ಅವರು ಇಡೀ ದೇಶದ ಆಹಾರ ಭದ್ರತೆ ಮತ್ತು ದೇಶದ ಸಾರ್ವಭೌಮತ್ವವನ್ನು ಉಳಿಸಿಕೊಳ್ಳಲು ಹೋರಾಟದ ಹೆಜ್ಜೆಗಳನ್ನು ಇಟ್ಟಿದ್ದಾರೆ. ಅವರಿಗೆ ಪೂರ್ಣ ಬೆಂಬಲ ನೀಡುವುದು ದೇಶದ ಎಲ್ಲಾ ಸಂಘ–ಸಂಸ್ಥೆಗಳ, ಸಂಘಟನೆಗಳ, ಜವಾಬ್ದಾರ ನಾಗರಿಕ ಸಮಿತಿಗಳ ಕರ್ತವ್ಯ.

***ಗಮನಿಸಿ***

*ಆಸಕ್ತರು ತಮ್ಮ ಈಮೇಲ್ ಐಡಿ ನೀಡುವ ಮೂಲಕ ಇಂಥ ಲೇಖನಗಳನ್ನು ಪಡೆದುಕೊಳ್ಳಬಹುದು.*